



ಚಿತ್ರ: ಎಎಫ್‌ಪಿ

## ಈಜುಕೊಳವನ್ನು ಹೊಂದಿದ ಮೊದಲ ಹಡಗು– ಟೈಟಾನಿಕ್

ಬೆಂಗಳೂರಿನ ಬಹುತೇಕ ಭಾಗಗಳಿಗೆ ಈಜುಕೊಳಗಳು ಬರಲು ಪ್ರಮುಖ ಪಾತ್ರ ವಹಿಸಿದವರು ಪಿ.ರಾಮದೇವ್ ಅವರು. ನಗರದ ಪ್ರತಿಯೊಂದು ಭಾಗದಲ್ಲಿ ‘3ಪಿ’ (ಪೂಲ್, ಪಾರ್ಕ್, ಪ್ಲೇಗ್ರೌಂಡ್) ಈಜುಕೊಳ, ಉದ್ಯಾನ ಹಾಗೂ ಆಟದ ಮೈದಾನ ಸ್ಥಾಪಿಸುವ ಕಲ್ಪನೆಯನ್ನು ಆಡಳಿತಗಾರರಲ್ಲಿ ತುಂಬಿ ಸಾಕಾರಗೊಳಿಸುವಲ್ಲಿ ಅವರು ತುಂಬಾ ಶ್ರಮ ವಹಿಸಿದರು. ಹಾಗೆ ಶುರುವಾದ ಈಜು ಪರಂಪರೆ ಈಗ ಹೆಮ್ಮರವಾಗಿ ಬೆಳೆದಿದೆ. ದೇಶದ ಈಜು ಕ್ರೀಡೆಯಲ್ಲಿ ಕರ್ನಾಟಕ ಮುಂಚೂಣಿಯಲ್ಲಿದೆ.

ಯೂರೋಪಿನ ಬಟಾವಿಯಾ ಬುಡಕಟ್ಟು ಜನಾಂಗ ಈಜು ವಿದ್ಯೆಯಲ್ಲಿ ಪ್ರಾವೀಣ್ಯ ಸಾಧಿಸಿತ್ತು. ರೋಮನ್ನರ ಸೈನ್ಯದಲ್ಲಿ ಈ ಜನಾಂಗದವರೇ ಹೆಚ್ಚಾಗಿದ್ದರು. ರಾಜಧಾನಿಯಿಂದ ಹೊರಟ ಅಶ್ವದಳ ಹಾಗೂ ಪದಾತಿದಳದ ನಿಯೋಜನೆಯ ವಿನ್ಯಾಸದಲ್ಲಿ ಒಂದಿನಿತೂ ಏರು–ಪೇರು ಆಗದಂತೆ ಈ ಸೈನ್ಯಪಡೆ ತುಂಬಿದ ನದಿಯನ್ನು ಈಜಿ ದಾಟುತ್ತಿತ್ತು. ಹಲವು ಯುದ್ಧಗಳಲ್ಲಿ ಜಯ ತಂದುಕೊಡಲು ಈ ಸೈನಿಕರೇ ಪ್ರಧಾನ ಪಾತ್ರ ವಹಿಸಿದ್ದರು. – ಹೀಗೆ ಇತಿಹಾಸದ ಆಳಕ್ಕೆ ಜಿಗಿದಷ್ಟೂ ಇಂತಹ ರೋಚಕ ಕಥೆಗಳ ಮುತ್ತುಗಳು ಸಿಗುತ್ತಲೇ ಹೋಗುತ್ತವೆ.

ಹೌದು, ಈಜಿಗೆ ದೊಡ್ಡ ಇತಿಹಾಸವಿದೆ. ಈಜಿದರೆ ಭವ್ಯ ಭವಿಷ್ಯವಿದೆ. ಆದ್ದರಿಂದಲೇ ವರ್ತಮಾನದಲ್ಲಿ ನಾವೀಗ ಈಜುಕೊಳಕ್ಕೆ ಧುಮುಕಬೇಕಿದೆ. ಹಿಂದಿನ ಹಿರಿಯರು ಹೇಳಿದ್ದು ನೆನಪಿರಬೇಕಲ್ಲ: ಈಸಬೇಕು, ಇದ್ದು ಜೈಸಬೇಕು!